ಸಾಕ್ಷಿಯನ್ನು ದಿ:21.10.2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀಸವಾಲು:- ಪ್ರತಿವಾದಿಗಳ ಪರ ಶ್ರೀ ಎನ್ ಎಸ್ ವಕೀಲರಿಂದ:-

ನಿಪಿ37 ರ ಮರಣ ಶಾಸನವನ್ನು ನನ್ನ ತಾತನಾದ ವೆಂಕಟರಾಮಯ್ಯರವರು ಮಂಗಮ್ಮ ಮತ್ತು ಜಾನಕಮ್ಮ ರವರಿಗೆ ಸುಮಾರು 10 ಆಸ್ತಿಗಳಿಗೆ ಸಂಬಂಧಿಸಿದಂತೆ ಬರೆದುಕೊಟ್ಟಿರುತ್ತಾರೆ. ನನ್ನ ತಾತನಾದ ವೆಂಕಟರಾಮಯ್ಯರವರು 1968 ರಲ್ಲಿ ಮರಣ ಹೊಂದಿರುತ್ತಾರೆ. ನಿಪಿ37 ರ ಮರಣ ಶಾಸನದಂತೆ ಮಂಗಮ್ಮ ಮತ್ತು ಜಾನಕಮ್ಮರವರಿಗೆ 10 ಆಸ್ತಿಗಳ ಖಾತೆ ಆಗಿರುತ್ತದೆ. ಸದರಿ ಖಾತೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಿಪಿ38 ರ ಪಹಣಿ ಪತ್ರಿಕೆಯಂತೆ ಚೂಡಾಡಿ ಮುನಿಸ್ವಾಮಿ ರವರ ಪವತಿ ನಂತರ ವೆಂಕಟರಾಮಯ್ಯ ಹೆಸರಿಗೆ ಅಥವಾ ಮಂಗಮ್ಮ ಮತ್ತು ಜಾನಕಮ್ಮರವರಿಗೆ ಖಾತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ37 ರ ಮರಣ ಶಾಸನ 1 ನೇ ಸ್ವತ್ತಾದ ಸ ನಂ 2/6 ರ ಚೆಕ್ಕುಬಂದಿ ಪೂರ್ವಕ್ಕೆ ಖರಾಬ್ ಜಮೀನು, ಪಶ್ಚಿಮಕ್ಕೆ ಸ ನಂ 2/5 ಗುರು ವೆಂಕಟರವಣಪ್ಪನ ಅಳಿಯ ಮುನಿಸ್ವಾಮಿ ಜಮೀನು, ಉತ್ತರಕ್ಕೆ ಮುಸಲಪ್ಪನವರ ವೆಂಕಟರಾಮಪ್ಪ ಜಮೀನು ಮತ್ತು ದಕ್ಷಿಣಕ್ಕೆ ಒಬೇಪಲ್ಲಿ ಮುನಿಸ್ವಾಮಿ ಅಲಿಯಾಸ್ ಮುನಿಯಪ್ಪ ರವರ ಜಮೀನು ಎಂದು ನಮೂದಾಗಿರುತ್ತದೆ. ನನಗೆ ಉತ್ತರ ಮತ್ತು ದಕ್ಷಿಣದ ಚೆಕ್ಕುಬಂದಿಗಳ ಸರ್ವೆ ನಂಬರ್ ನಿಖರವಾಗಿ ಗೊತ್ತಿಲ್ಲ. ನಿಪಿ37 ರ ಮರಣ ಶಾಸನದ ಚೆಕ್ಕುಬಂದಿಯಂತೆ ಅವರ ಹೆಸರುಗಳನ್ನು ದಾವಸ್ವತ್ತಿನಲ್ಲಿ ನಮೂದು ಮಾಡಿರುತ್ತೇನೆ. ನಿಪಿ37 ರ ಮರಣ ಶಾಸನದಲ್ಲಿ ಸ ನಂ 2/6 ರ ವಿಸ್ತೀರ್ಣ 6 ಗುಂಟೆ ಎಂಬುದಾಗಿ ಇರುತ್ತದೆ ಎಂದರೆ ಗೊತ್ತಿಲ್ಲ.

5. ನಿಪಿ37 ರ ಮರಣ ಶಾಸನಕ್ಕೆ ಸಾಕ್ಷಿದಾರರಾಗಿ ವರದಾಚಾರಿ ಮತ್ತು ರೆಡ್ಡಿಪಲ್ಲಿ ಅಪ್ಪಯ್ಯ ಇರುತ್ತಾರೆ. ನನ್ನ ತಾತ ವೆಂಕಟರಾಮಯ್ಯ ಯಾವುದೇ ಮರಣ ಶಾಸನ ಬರೆದುಕೊಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ37 ರ ಮರಣ ಶಾಸನದಂತೆ ದಾವ ಆಸ್ತಿಯು ಜಾನಕಮ್ಮ ಮತ್ತು ಮಂಗಮ್ಮರವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಜಾನಕಮ್ಮ ಮತ್ತು ಮಂಗಮ್ಮರವರು ದಾವಸ್ವತ್ತಿಗೆ ಸಂಬಂಧಿಸಿದಂತೆ ನನಗೆ ಯಾವುದೇ ನೋಂದಣಿ ಪತ್ರ ಬರೆದುಕೊಟ್ಟಿರುವುದಿಲ್ಲ. ದಾವ ಆಸ್ತಿ ನನಗೆ ಸೇರದೇ ಇದ್ದರೂ ಸಹ ಪವತಿ ಖಾತೆ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

6. ನಿಪಿ59 ರಿಂದ 64 ರ ಭಾವ ಚಿತ್ರಗಳನ್ನು ಹಾಲಿ ದಾವೆಯನ್ನು ಹಾಕುವ ಮೊದಲು ಮತ್ತು ಮನೆ ಕಟ್ಟಿದ ನಂತರ ತೆಗೆದಿರುತ್ತೇನೆ. ನಿಪಿ60 ರ ಭಾವಚಿತ್ರದಲ್ಲಿರುವ ಅಡಿಪಾಯವನ್ನು ಪ್ರತಿವಾದಿಗಳೇ ಹಾಕಿರುತ್ತಾರೆ. ನಿಪಿ61 ರ ಭಾವಚಿತ್ರದಲ್ಲಿರುವ ಕಟ್ಟಡ ಪ್ರತಿವಾದಿಗಳು ಕಟ್ಟಿರುತ್ತಾರೆ. ನಿಪಿ61 ರ ಭಾವಚಿತ್ರದಲ್ಲಿರುವ ಕಟ್ಟಡವನ್ನು ಪ್ರತಿವಾದಿಗಳು ಅವರ ಜಾಗದಲ್ಲಿ ಕಟ್ಟಿರುವ ಬಗ್ಗೆ ಗೊತ್ತಿದ್ದರೂ ಸಹ ಕಟ್ಟುವಾಗ ಯಾವುದೇ ತಕರಾರು ಮಾಡದೇ ಸುಳ್ಳು ದಾವೆಯನ್ನು ಹಾಕಿರುತ್ತೇನೆಂದರೆ ಸರಿಯಲ್ಲ. ನಿಪಿ39 ರಿಂದ 58 ರ ಕಂದಾಯ ರಶೀದಿಗಳಿಗೂ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ34 ರಿಂದ 36 ರ ಪಟ್ಟಾ ರಶೀದಿಗಳೂ ಸಹ ಹಾಲಿ ದಾವೆಗೆ ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್